ಅಧ್ಯಕ್ಷರಾಗಿದ್ದ ಪ್ರೊ. ಎಂ.ಎಚ್. ಕೃಷ್ಣಯ್ಯನವರು ಹಾಗೂ ರಿಜಿಸ್ಟ್ರಾರ್ ಮಲ್ಲಿಕಾರ್ಜುನಸ್ವಾಮಿಯವರು 'ಸ್ವಂತ ಕವಿತೆಯ ಓದು' ಸರಣಿಯನ್ನು ಅಕಾಡೆಮಿಗಾಗಿ ರೂಪಿಸುತ್ತಿರುವುದಾಗಿ ಹೇಳಿದರು. ನನ್ನ ಕವಿತೆಗಳನ್ನು ಓದಿಸಿ, ರೆಕಾರ್ಡಿಂಗ್ ಮಾಡಬೇಕೆಂದು ಅವರು ಕೇಳಿದಾಗ, ಮೊದಲು ಹಾಸನ ಜಿಲ್ಲೆಯ ಪ್ರಥಮ ಆಧುನಿಕ ಕವಯಿತ್ರಿ ವಿಜಯಾ ದಬ್ಬೆಯವರ ಕವಿತೆ ಓದಿನ ದಾಖಲೀಕರಣವಾಗಬೇಕೆಂದು ನಾನು ಹಟ ಹಿಡಿದಿದ್ದೆ. 'ಅವರಿಗೆ ಅನಾರೋಗ್ಯ, ನೆನಪಿನ ಶಕ್ತಿಯೂ ಇಲ್ಲ, ಮಾತಾಡಲೇ ಸರಿಯಾಗಿ ಆಗಲ್ಲವಂತೆ, ಹೇಗೆ ರೆಕಾರ್ಡಿಂಗ್ ಮಾಡೋದು?' ಎಂದು ಪ್ರಶ್ನಿಸಿದ್ದರು. 'ಖಂಡಿತಾ ಅವರಿಂದ ಒಂದಾದರೂ ಕವಿತೆ ಓದಿಸಲೇಬೇಕು, ನಾನು ಅದನ್ನೆಲ್ಲಾ ನೋಡಿಕೊಳ್ಳುತ್ತೇನೆ' ಎಂದು ಭರವಸೆ ನೀಡಿ ಅವರನ್ನು ಒಪ್ಪಿಸಿದ್ದೆ. ನಿರ್ದೇಶಕ ಚಿಕ್ಕ ಸುರೇಶ ಅವರು, ತಾಳ್ಮೆಯಿಂದ ಚಿತ್ರೀಕರಣ ಮಾಡಿದ್ದರು. ಮೇಡಂ ಒಂದು ಕವಿತೆ ಓದಬಹುದೇನೋ ಎಂದು ಇನ್ನಿತರ ವಿವರಗಳನ್ನೇ ಹೆಚ್ಚು ಚಿತ್ರೀಕರಣ ಮಾಡಿಕೊಂಡಿದ್ದರು. ನಾನು ಒಂದು ಕವಿತೆಯನ್ನು ಆಯ್ದು, ಅವರ ಸಹೋದರ ಸೋಮಶೇಖರ್ ಅವರಿಗೆ ದೂರವಾಣಿಯ ಮೂಲಕ ತಿಳಿಸಿ, ಇದನ್ನೇ ಮತ್ತೆ ಮತ್ತೆ ಓದಿಸಿ ಅಭ್ಯಾಸ ಮಾಡಿಸಿ ಎಂದು ಹೇಳಿದ್ದೆ. ಆದರೆ ವಿಜಯಾ ಮೇಡಂ ಒಂದು ಕವಿತೆ ಅಭ್ಯಾಸ ಮಾಡಲು ಕವನ ಸಂಕಲನ ತೆಗೆದವರು, ಅದರಲ್ಲೇ ಮುಳುಗಿಹೋಗಿದ್ದರಂತೆ! ವಿಡಿಯೋ ಚಿತ್ರೀಕರಣದ ದಿನ ಉತ್ಸಾಹದಿಂದ ಐದು ಪುಟ್ಟ ಕವಿತೆಗಳನ್ನು ಓದಿದ್ದರು! ಅದು ಒಂದು ಅಪೂರ್ವ ದಾಖಲೆಯಾಗಿ ಸಾಹಿತ್ಯ ಅಕಾಡೆಮಿಯಲ್ಲಿ ಉಳಿಯುವಂತಾಯ್ತು. ನನಗಂತೂ ಇದನ್ನು ನೆನೆದಾಗಲೆಲ್ಲಾ ಅತ್ಯಂತ ಸಂತೊಷ ಮತ್ತು ಧನ್ಯತೆಯ ಭಾವ ಪಸರಿಸುತ್ತದೆ.

ಅನಂತರ ಈ ಕವಿತೆಗಳ ರೆಕಾರ್ಡಿಂಗ್ ನೋಡಿದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆಯಾಗಿದ್ದ ವಸುಂಧರಾ ಭೂಪತಿಯವರು, ಅವರ ಕುರಿತು ಒಂದು ಸಾಕ್ಷ್ಯಚಿತ್ರವನ್ನು ಮಾಡಬಹುದಲ್ಲವೇ ಎಂದು ನನ್ನ ಬಳಿ ಸುದೀರ್ಘವಾಗಿ ಚರ್ಚಿಸಿದ್ದರು. ನಾನು ಆಗಬಹುದು ಎಂದಾಗ ಅದನ್ನು ನಿರ್ಮಿಸುವ ಜವಾಬ್ದಾರಿಯನ್ನು ಚಿಕ್ಕಸುರೇಶ ಅವರಿಗೇ ನೀಡಿದರು. ಜೊತೆಗೆ ನನಗೆ ಅವರೊಂದಿಗೆ ಸಂವಾದಿಸಿ, ಸಾಧ್ಯವಾದಷ್ಟೂ ಅವರಿಂದ ನೆನಪು ಮತ್ತು ಅನುಭವವನ್ನು ಹೊರತೆಗೆಯುವ ಅವಕಾಶ! ಇದು ನಿಜಕ್ಕೂ ನನಗೊಂದು ಪ್ರೀತಿಯ ಹಾಗೂ ಅಷ್ಟೇ ಸವಾಲಿನ ಕೆಲಸವಾಗಿತ್ತು. ಆ ಸಂದರ್ಭದಲ್ಲಿಯೂ ಏಕಾಂತದಲ್ಲಿ, ಅತ್ಯಂತ ಆಪ್ತ ಕ್ಷಣಗಳನ್ನು ಅವರೊಂದಿಗೆ ಕಳೆದದ್ದು, ಅವರ ಆಳದಾಳದ ಮಾತನ್ನು ಆಲಿಸಿದ್ದು, ಅವರ ಮಗುವಿನಂತಹ ಪ್ರೀತಿಯನ್ನು ಅನುಭವಿಸಿದ್ದು ಎಂದಿಗೂ ಮರೆಯಲಾಗದ ಅಪೂರ್ವ ಅನುಭವ. ಲೇಖಕಿಯರ ಸಂಘಕ್ಕಾಗಿ ಮಾಡಿದ ಈ ಸಂದರ್ಶನ, ಸಾಕ್ಷ್ಯಚಿತ್ರವೂ ಒಂದು ದಾಖಲೆಯಾಗಿ ನಮ್ಮ ಪಾಲಿಗೆ ಉಳಿಯುವಂತಾಯ್ತು. ಆದರೆ ಈಗ, ಇದೆಲ್ಲಕ್ಕೆ ಕಾರಣರಾದ ವಿಜಯ ದಬ್ಬೆಯವರೂ, ಎಂ.ಎಚ್. ಕೃಷ್ಣಯ್ಯ ಅವರು ಹಾಗೂ ಚಿಕ್ಕ ಸುರೇಶ – ಯಾರೂ ನಮ್ಮೊಂದಿಗಿಲ್ಲ...! ನೆನಪಷ್ಟೇ ಮಧುರ.

ವಿಜಯಾ ಮೇಡಂ ಆರೋಗ್ಯದಲ್ಲಿ ಆಗಿದ್ದ ಧನಾತ್ಮಕ ಬದಲಾವಣೆಯನ್ನು ಹತ್ತಿರದಿಂದ ಕಂಡಿದ್ದ ನಾನು, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯಳಾಗಿದ್ದಾಗ 2015ರ ಅಕ್ಟೋಬರ್‌ನಲ್ಲಿ, ಧೈರ್ಯವಾಗಿ ಹಾಸನದಲ್ಲಿ ಅವರೊಂದಿಗೆ ಒಂದು ಸಾರ್ವಜನಿಕ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆ. ಬಹುಶಃ ಅಪಘಾತದ ನಂತರ, ಅಂದೇ ಅವರು ಅಷ್ಟು ವಿವರವಾಗಿ, ಆಸಕ್ತ ಸಭಿಕರ ಅನೇಕ ಪ್ರಶ್ನೆಗಳಿಗೆ ಸಾವಧಾನವಾಗಿ ಯೋಚಿಸಿ ಉತ್ತರಿಸಿದ್ದು! ಅವರ ಪ್ರತಿ ಮಾತಿನಲ್ಲಿ ಹೆಣ್ಣುಮಕ್ಕಳ ಬಗೆಗಿನ ಕಾಳಜಿ ಎದ್ದು ಕಾಣುತ್ತಿತ್ತು. ಹೆಣ್ಣುಮಕ್ಕಳು ಚಿಕ್ಕವಯಸ್ಸಲ್ಲೇ ಪ್ರೀತಿಯಲ್ಲಿ ಬಿದ್ದು ಬದುಕು ಹಾಳು ಮಾಡಿಕೊಳ್ಳಬಾರದು. ಹೆಚ್ಚೆಚ್ಚು ಶಿಕ್ಷಿತರಾಗಬೇಕು, ಉದ್ಯೋಗಿಗಳಾಗಬೇಕೆಂದು ಅವರು ಪದೇ ಪದೇ ಆಡಿದ ಎಚ್ಚರದ ನುಡಿ ಇಂದಿಗೂ ಕಿವಿಯಲ್ಲಿ ಅನುರಣಿಸುತ್ತಿದೆ.

ಹಾಸನ ಜಿಲ್ಲೆಯ ಮೂಲೆಯ ಪುಟ್ಟಹಳ್ಳಿಯ ಸಂಪ್ರದಾಯಸ್ಥ ಕುಟುಂಬದ ಹೆಣ್ಣುಮಗಳೊಬ್ಬಳು ಆ ಕಾಲಕ್ಕೇ ಸಾಹಿತ್ಯ ಹಾಗೂ ಮಹಿಳಾ ಹೋರಾಟದ ಚರಿತ್ರೆಯಲ್ಲಿ ಬಹು ಎತ್ತರವನ್ನು ತಲುಪಿದ್ದು ಖಂಡಿತಾ ದೊಡ್ಡ ಸಾಧನೆಯೇ. ವಿಜಯಾ ದಬ್ಬೆಯವರ ಬರಹ, ಕೆಲಸಗಳು, ಚೈತನ್ಯ ಕಿರಿಯರಿಗೆ ಪ್ರೇರಣೆಯಾಗಬೇಕು. ●